ಸದರೀ ದರಖಾಸ್ತುದಾರನಾದ ನಾರೆಪ್ಪನ ಅರ್ಜಿಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 11ರಲ್ಲು ಕೇಳಿ ಸರಟಿ ಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಪಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ನವಂಬರ್ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ್.

ಸೆಂಟ್ರಲ್ ಜೈಲ್.

ಇಸ್ತಿಹಾರ್‌ನಾಮಾ.

ತಾರೀಖು 4ನೇ ನವೆಂಬರ್ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಯೂ, ಡಿಸ್ಟ್ರಿಕ್ಟು ಲಾಕಪ್ಪಿನಲ್ಲಿಯೂ, ಖೈದ್ ಮಾಡಲ್ಪಟ್ಟಿರುವ ಖೈದಿಗಳ ಪುಪಯೋಗದ ಬಗ್ಗೆ ಬೇಕಾದ ಆಹಾರ ಪದಾರ್ಥಗಳು ವಗೈರೇ ದರೋಬಸ್ತು ಜಿನಸಿಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಕೊಡಲ್ಪಡುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಸ್ಯ 1884ನೇ ಇಸವಿ ಡಿಸಂಬರ್ 1ನೇ ತಾರೀಖಿನ ವರಿಗೆ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು ತೆಗದುಕೊಳ್ಳುವರು.

2. ಮೇಲೆ ಕಂಡ ತಾರೀಖಿಗೆ ತರುವಾಯ ದರಖಾಸ್ತುಗಳು ಯಾವಪ್ರಾ ತೆಗದುಕೊಳ್ಳಲ್ಪಡಲಾರವು.

3. ದರಖಾಸ್ತುಗಳ ಮೇಲೆ "ಸೆಂಟ್ರಲ್ ಜೈಲಿಗೂ, ಡಿಸ್ಟ್ರಿಕ್ಟು ಲಾಕಪ್ಪಿಗೂ ಜಿನಸೀಗಳ ಸರಬರಾಯಿ ಬಗ್ಗೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. ನಗದಾಗಿಯಾಗಲಿ ಕರೆನ್ಸಿ ನೋಟುಗಳ ಮೂಲಕವಾಗಿಯಾಗಲಿ, 500 ರೂಪಾಯಿಗಳ ಡಿಪಾಜಿಟ್ ದೇಖಿಲ್ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಮೇಲೆ ಕಂಡ ತಾರೀಖಿನೊಳಗೆ ಅಲ್ಲಿಗೆ ಬರುವದಕ್ಕೆ ಖಾಯಿಷ್ ಮಾಡುವ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ ಈಕೆಳಗೆ ಬರುವ ವಳ್ಳೀಚರಹಾದ ಜಿನಸೀಗಳನ್ನು ರೂಪಾಯಿ 1ಕ್ಕೆ ಕೂಡಿ ತೂಕದ ಪ್ರಕಾರ ಸರಬರಾಯಿ ಮಾಡತಕ್ಕ ದರವನ್ನು ನಮೂದಿಸತಕ್ಕದ್ದು.

ಅಕ್ಕಿ	ಹಸೀ ಅಕ್ಕಿ ವ ಕುದಪಲ ಅಕ್ಕಿ	...		ತರಕಾರಿ
ರಾಗಿ	..	..	..	ಹುರಳಿ
ಬೇಳೆ	..	..	..	ರವೆ
ಅವರೆ	..	..	..	ಸಕ್ಕರೆ
ಮೊಂಸ	..	..	..	ಕಾಫಿ
ಮೊಸರು	..	..	..	ತೆ ಯಲೆ
ಯಳ್ಳೆಂಣೆ	..	..	..	ರೊಟ್ಟಿ
ತುಪ್ಪ	..	..	...	ಹಾಲು
ಹುಣಸೇಹಣ್ಣು	..	..	..	ಬೀಗೆಕಾಯಿ
ಪುಪ್ಪು	..	..	..	ಸಬ್ಬು
ಮಸಾಲೆ ಪುಡಿ	..	..	..	ಗೇರುಬೀಜ
ಈರುಳ್ಳಿ	..	..	..	ಮೆಣಸು
ಬೆಳ್ಳುಳ್ಳಿ	..	..	..	ಮಣಗಿದ ಸಾಮೆ

7. ದರಖಾಸ್ತು ಪಟ್ಟಿಯಲ್ಲಿ ಮೇಲೆನಮೂದಿಸಿದ ಪದಾರ್ಥಗಳಿಗೆ ಮಾತ್ರವಲ್ಲದೆ ದೀಪದ ಯಂಣೆ, ಕೆರೋಜೆರ್ಯ್ ಯಂಣೆ, ಮರಣಿನ ಹರಿವಾಣಗಳು, ಲೋಟುಗಳು, ಪರಿಕೆ ವಗೈರೇ ಪದಾರ್ಥಗಳಿಗೂ ದರಗಳು ನಮೂದಿಸಬೇಕು. ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವ ಬಗ್ಗೆ ರಾಗಿಯನ್ನು ಸರಬರಾಯಿ ಮಾಡತಕ್ಕದ್ದು. ಮತ್ತು ಹಿಟ್ಟಾಗಿ ಕೊಡಲ್ಪಡುವದು, ರಾಗಿ ಧಾರಣೆ ಪ್ರಕಾರ ಸರಬರಾಯಿ ಮೊಡಿದ್ದನ್ನು ಹಾಗೆ ಕೊಡಲ್ಪಟ್ಟ ಪರಿಮಾಣದ ಮೇಲೆ ಲೆಕ್ಕ ಮಾಡಿ ಅದರಂತೆ ಬೊಬಲಗು ಪಾವತ್ತೀ ಮಾಡಲ್ಪಡುತ್ತೆ.

8. (ನಾನಾ ಸ್ಕೇಲ್‌ಗಳ ಮೇಲೆ ಯಿರುವ ರೋಜಿನಾ 750 ಮಂದಿ ಖೈದಿಗಳಿಗಾಗಿ) ಈ ಸಂವತ್ಸರಕ್ಕೆ ಬೇಕಾಗಬಹುದಾದ ಮುಖ್ಯ ಪದಾರ್ಥಗಳ ಅಂದಾಜಾ ಇದರಲ್ಲೀ ಕಂಡಂತೆ ಯಿರತಕ್ಕದ್ದು.

	ಪೌಂಡುಗಳು.		ಪೌಂಡುಗಳು.
ರಾಗಿ ..	346,340	ಯಳ್ಳೆಂಣೆ ..	2,361
ಅಕ್ಕಿ ..	78,471	ಪುಪ್ಪು ..	10,417
ತೊಗರಿ ಅಥವಾ ಅವರೆ ..	52,083	ಮಸಾಲೆ ಪುಡಿ ..	7,986
ತರಕಾರಿ ..	104,161	ಈರುಳ್ಳಿ ..	10,417
ಮೊಂಸ ..	23,612	ಸಾಬೆ ..	416,667
ತುಪ್ಪ ..	2,361		

9. ಸೂಪರ್ಿಟೆಂಡೆಂಟರವರು, ಯಾವ ದರಖಾಸ್ತನ್ನಾಗಲಿ ಕಾರಣವನ್ನು ತಿಳಿಸದೇಯೇ ನಿರಾಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡು ಯಿರುತ್ತಾರೆ.

10. ಮಂಜೂರಾದ ದರಖಾಸ್ತುದಾರನ ತೇವಣೀ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು ಅವನು ಗುತ್ತಿಗೇಚೀಟು ಬರದುಕೊಡಲಿಕ್ಕಾಗಲಿ ತನ್ನ ಗುತ್ತಿಗೆ ಮಂಜೂರಾದ್ದು ತನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು ಒಂದು ವಾರದೊಳಗಾಗಿ ನಗದಾಗಿ ಯೂ ಗವರ್ಮೆಂಟ್ ಪತ್ರಗಳ ಮೂಲಕ 1,500 ರೂಪಾಯಿಗಳಿಗೆ ಜಾಮೀನು ಕೊಡಲಿಕ್ಕಾಗಲಿ ತಪ್ಪಿದರೆ ಸದರೀ ತೇವಣೀ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸ್ ಯಾವದೂ ಕೊಡಲ್ಪಡಲಾರದು: ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗಾಗಿ ಮೊಬಲಗುಗಳು ಪ್ರತಿ ತಿಂಗಳ 1ನೇ ತಾರೀಖಿಗೆ ತರುವಾಯ ಕೂಡಿದಷ್ಟು ತ್ವರೆಯಾಗಿ ಸೆಂಟ್ರಲ್ ಜೈಲ್ ಸೂಪರ್ಿಟೆಂಡೆಂಟರಿಂದ ಸಲ್ಲಿಸಲ್ಪಡುವದು.

12. ಕಂಟ್ರಾಕ್ಟುದಾರನಿಗೆ ಉಗ್ರಾಣದ ಬಗ್ಗೆ ಒಂದು ಖೋಲೆಯು ಕೊಡಲ್ಪಡುವ್ತದು. ಅದರಲ್ಲಿ ನಷ್ಟವಾಗದೇ ಯಿರುವ ದರೋಬಸ್ತು ಪದಾರ್ಥಗಳನ್ನೂ ಅವನು ಯಿಟ್ಟುಕೊಳ್ಳಬಹುದು, ಮೊಂಸ ವಗೈರೆ ನಷ್ಟವಾಗತಕ್ಕ ಪದಾರ್ಥಗಳು ಪ್ರತಿ ದಿವಸ ಬೆಳ್ಗ್ಯೆ 8 ಘಂಟೆಯೊಳಗೆ ಜೈಲಿಗೆ ಬಂದಿರತಕ್ಕದ್ದು.

13. ಕಂಟ್ರಾಕ್ಟು ವಳಗೇಣಿಗೆ ಕೊಡಲ್ಪಡಕೂಡದು.

14. ಕಂಟ್ರಾಕ್ಟಿನ ನಿಬಂಧನೆಗಳ ಬಾಬತು ಯಾವ ಅತಿಕ್ರಮಕ್ಕಾಗಲಿ, ಯಾವದಾದರೂ ಹಲ್ಕೀ ಪದಾರ್ಥಗಳ ಸರಬರಾಯಿ ಬಗ್ಗಾಗಲಿ, ಸೆಂಟ್ರಲ್ ಜೈಲ್ ಸೂಪರ್ಿಟೆಂಡೆಂಟರ ಯಚ್ಛಾಶ್ರೀ ಮೇಲೆ 150 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆ ವಸೂಲ್ ಮಾಡಲ್ಪಡುವದು, ಬಾರ್‌ಬಾರ್ ಅತಿಕ್ರಮ ನಡಸಿದ ಪಕ್ಷಕ್ಕೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನು ಮೊಬಲಗು ಸರಕಾರಕ್ಕೆ ತೆಗದುಕೊಳ್ಳಲ್ಪಡುವದು.

15. ಈ ಕಂಟ್ರಾಕ್ಟಿನ ಅತಿಕ್ರಮಕ್ಕೆ ಸಂಬಂಧಿಸಿದ ದರೋಬಸ್ತು ಸಂಗತಿಗಳಲ್ಲಿಯೂ ಸೆಂಟ್ರಲ್ ಜೈಲ್ ಸೂಪರ್ಿಟೆಂಡೆಂಟರ ತೀರ್ಮಾನವು ಅಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು ಕಂಟ್ರಾಕ್ಟಿನ ದರದ ಪ್ರಕಾರವೇ ಖೈದೀಗಳ ವುಪಯೋಗಕ್ಕೊತ್ತಾಸ್ತರ ಜೈಲ್ ತೋಟದಿಂದ ಕಾಯಿಪಲ್ಯಗಳನ್ನು ಕೊಂಡು ಕೊಳ್ಳಬೇಕು.

17. ಹೆಚ್ಚಿಗೇ ಸಂಗತಿ ಯಾವದಾದರೂ ತಿಳಕೊಳ್ಳಬೇಕಾದರೆ ಸೂಪರ್ಿಟೆಂಡೆಂಟರ ಅಫೀಸಿನಲ್ಲಿ ಕೇಳಿ ತಿಳದುಕೊಳ್ಳತಕ್ಕದ್ದು.

18. ಈ ಕಂಟ್ರಾಕ್ಟು ಮೈಸೂರು ಶೀಮೆಯಲ್ಲಿನ ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರ ಮಂಜೂರಾತಿಗೆ ವೆಳಪಟ್ಟಿರತಕ್ಕದ್ದು.

ಜೆ. ಡೆಡರ್ಸ್,
ಸೂಪರ್ಿಟೆಂಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 463.

ಮೃತಪಟ್ಟ ಶಿದ್ದರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಥೋಂಜೋಜಿಯು, ಮೃತಪಟ್ಟ ಸದರೀ ಶಿದ್ದರಾಮಯ್ಯನಿಗೆ ಸೋದರಮಾವನಮಗ ಆಗಬೇಕೆಂಬ ಹಕ್ಕು ದಾರೀ ಮೇಲೆ ಮೈಸೂರು ಬಸವನ ಮೊಹಲ್ಲಾ ಸ್ಥಳವ ಸದರೀ ಥೋಂಜೋಜಿಯು ಸದರೀ ವಾಸಸ್ಥನಾಗಿ ಮೃತಪಟ್ಟ ಶಿದ್ದರಾಮಯ್ಯನ ಜಿಂದಗಿ ಬಗ್ಗಾಗಿ